ಶ್ರೀ ರಘೂತ್ತಮರಂಘ್ರಿ ರಾಜೀವಯುಗ್ಮದಲ್ಲಿ
ಶಿರಬಾಗಿ ಶರಣಾದೆ ಧನ್ಯನಾದೆ
ಶ್ರೀ ರಾಮಚಂದ್ರನ ಪೂರ್ಣಾನುಗ್ರಹ ಪೂರ್ಣ
ಪಾತ್ರರು ಎಮ್ಮ ಪಾಲಿಸುವ ಕರುಣಾಳು ॥ ಪ ॥

ಶ್ರೀ ಹಂಸ ಲಕ್ಷ್ಮೀಶ ಪರಮಾತ್ಮ ಸರ್ವೇಶ
ಬ್ರಹ್ಮಸನಕಾದಿಗಳ ಗುರುಪರಂಪರೆಯ
ಬ್ರಹ್ಮಪದ ಐದುವ ಶ್ರೀ ಆನಂದತೀರ್ಥರ
ನೀರುಹ ಚರಣಂಗಳಲ್ಲಿ ಶರಣಾದೆ ॥ ೧ ॥

ಪಂಕೇರುಹನಾಭ ನರಹರಿಮಾಧವ
ಅಕ್ಷೋಭ್ಯ ಜಯತೀರ್ಥ ವಿದ್ಯಾಧಿರಾಜ
ವಾಗ್ವಜ್ರ ರಾಜೇಂದ್ರ ಕವಿವರ ಕವೀಂದ್ರ
ವಾಗೀಶ ಶ್ರೀರಾಮಚಂದ್ರರಿಗೆ ಶರಣು ॥ ೨ ॥

ಶ್ರೀ ರಾಮಚಂದ್ರ ಕರಜರು ಈರ್ವರಿಗೂ
ಎರಡನೇಯವರು ವಿದ್ಯಾನಿಧಿಯ ಹಸ್ತ
ಅರವಿಂದೋತ್ಪನ್ನ ರಘುನಾಥರಿಗೆ ನಮೋ ಎಂಬೆ
ಸೂರಿವರ ರಘುವರ್ಯರಲ್ಲಿ ಶರಣಾದೆ ॥ ೩ ॥

ರಘುವರ್ಯ ಗುರುರಾಜ ಕರಕಮಲ ಸಂಜಾತ
ರಘೂತ್ತಮತೀರ್ಥರ ಚರಣಕಾನಮಿಪೆ
ಅಗಣಿತ ಗುಣಾಂಬುಧಿ ಅಘದೂರ ರಘುಪತಿಯ
ಹೃದ್ಗುಹಾ ಒಳಹೊರಗೆ ಕಾಂಬುವ ಧೀರ ॥ ೪ ॥

ರಾಮಚಂದ್ರಾಚಾರ್ಯ ನಾಮ ಬಾಲಕರು
ಬ್ರಹ್ಮಚಾರಿಯು ಧೃಡವ್ರತನು ಹರಿಭಕ್ತ
ಸುಮನೋಹರಮೂರ್ತಿ ಗುಣಗಣಾಲಂಕೃತನು
ಈ ಮಹಾವೇದಾಂತ ಪೀಠಕ್ಕೆ ಅರ್ಹ ॥ ೫ ॥

ತಮ್ಮ ಮಠ ಶಿಷ್ಯರಲು ಮಾಧ್ವ ಸಜ್ಜನರಲ್ಲೂ
ಸುಮಹಾ ಪಂಡಿತರು ಇರುತ್ತಿದ್ದರೂನು
ಈ ಮಹಾ ಪುರುಷ ಬಾಲನೇ ತಕ್ಕವನೆಂದು
ನೇಮಿಸಿದರು ಪೀಠಕ್ಕೆ ರಘುವರ್ಯ ಗುರುವು ॥ ೬ ॥

ರಘೋತ್ತಮತೀರ್ಥ ನಾಮದಿ ತುರಿಯಾಶ್ರಮ
ರಘುವರ್ಯರೀ ರಾಮಚಂದ್ರಗೆ ಇತ್ತು
ರಾಘವನ ಪೂಜಾದಿ ಸಂಸ್ಥಾನ ಅಧಿಕಾರ
ನಿಗಮಾಂತ ವಿದ್ಯಾ ಒದಗಿಸಿದರು ತೀರ್ವ ॥ ೭ ॥

ಚಿಕ್ಕ ಈ ಯತಿವರಗೆ ತಾವೇ ಭೋದಿಸಿ ಉಳಿದ
ಮಿಕ್ಕೆಲ್ಲ ವಿದ್ಯೆಗಳ ಕಲಿಯಬೇಕಾಗಿ
ಅಕ್ಕರದಿ ಪಾಠ ಹೇಳುವ ದೈವಿಕನನ್ನ
ರಘುವರ್ಯ ಗುರುಗಳು ನಿಯಮನ ಮಾಡಿದರು ॥ ೮ ॥

ವೇದವೇದಾಂತ ಇಚ್ಛಾಸ್ತ್ರ ಪಂಡಿತನು
ವಿದ್ಯಾರ್ಥಿ ಬಹುಮಂದಿಗೆ ಪಾಠ ಹೇಳುವ
ವಿದ್ವಾಂಸ ಓರ್ವನ್ನ ರಘುವರ್ಯತೀರ್ಥರು
ವಿದ್ಯೆ ಕಲಿಸಲು ಏರ್ಪಾಡು ಮಾಡಿದರು ॥ ೯ ॥

ಶೇಷಪ್ಪನಾಯಕರ ಮಕ್ಕಳು ಈರ್ವರಲಿ
ಜ್ಯೇಷ್ಠಪುತ್ರನು ವಿದ್ವಾಂಸರಲ್ಲಿ ಪ್ರಮುಖ
ಶಿಷ್ಯರೂ ಬಹು ಜನರು ಈತನಿಗೆ ಉಂಟು
ಭೂಷಣವೆಂದೆನಿಸಿದನು ಮಾಧ್ವ ಸಮೂಹಕ್ಕೆ ॥ ೧೦ ॥

ಸಾವಿರದ ನಾನ್ನೂರು ಎಪ್ಪತ್ತು ಒಂಭತ್ತು
ಸಂವತ್ಸರದಲಿ ಶಾಲಿವಾಹನದಿ
ದಿವಸ ತದಿಗೆ ಕೃಷ್ಣ ಜ್ಯೇಷ್ಠ ಪಿಂಗಳದಿ
ಶ್ರೀವರನಪುರಕೆ ತೆರಳಿದರು ರಘುವರ್ಯರು ॥ ೧೧ ॥

ದಯಾಳು ರಘುವರ್ಯರು ಸಮಾಧಿಸ್ಥರಾಗಲು
ಬಾಲ್ಯಾವಸ್ಥೆಯಲ್ಲಿ ಇದ್ದ ರಘೂತ್ತಮರು
ವಿದ್ಯಾವ್ಯಾಸಂಗ ಗುರು ನಿಯಮನದಂತೆಯೇ
ಗೈಯಲು ಪೋದರು ಆ ವಿದ್ವಾಂಸನಲ್ಲಿ ॥ ೧೨ ॥

ಮಣೂರು ಎಂದು ಹೆಸರುಳ್ಳ ಆ ಊರಲ್ಲಿ
ಘನ ವಿದ್ವನ್ಮಣಿಯಲ್ಲಿ ಕಲಿಯುವಾಗ
ಧನವಂತ ಊರು ನಾಯಕ ರಘೂತ್ತಮರಲ್ಲಿ
ಬಿನ್ನೈಸಿದ ಭೋಜನಕೆ ಬರಬೇಕೆಂದು ॥ ೧೩ ॥

ಸ್ವಾಮಿಗಳಿಗೆ ಪಾಠ ಹೇಳುವ ವಿಪ್ರನೂ
ಆ ಮನೆಯಲ್ಲಿ ಊಟಕ್ಕೆ ಬಂದಿದ್ದ ॥
ನೇಮ ಆಹ್ನಿಕ ಮುಗಿಸಿ ಗುರುಗಳು ಬರಲಿಕ್ಕೆ
ತಾಮಸವಾಯಿತು ವಿಲಂಬವು ಸ್ವಲ್ಪ ॥ ೧೪ ॥

ಸ್ವಾಮಿಗಳ ಬಾಲ್ಯತ್ವ ವಿದ್ಯಾರ್ಥಿತ್ವವು
ಆ ಮನೆ ಗೃಹಸ್ಥನನ್ನೂ ವಿಪ್ರನನ್ನೂ ಮೋಹಿಸಿತು ॥
ತಮ್ಮ ಯೋಗ್ಯತೆ ಸ್ಥಾನ ಮರೆತು ಗರ್ವದಿ ವಿಪ್ರ
ಸ್ವಾಮಿಗಳ ಲೆಕ್ಕಿಸದೆ ಕುಳಿತನು ಭೋಜನಕೆ ॥ ೧೫ ॥

ಅಂದು ರಾತ್ರಿ ಸ್ವಪ್ನದಲ್ಲಿ ರಘುವರ್ಯ ಗುರುಗಳು
ಬಂದು ಪೇಳಿದರು ತಮ್ಮ ಪ್ರಿಯಶಿಷ್ಯರಿಗೆ
ಇಂದಿನಾರಭ್ಯ ಪಾಠವು ನಿಲಿಸು ವಿಪ್ರನಲಿ
ಕುಂದಿಲ್ಲದೆ ಪಾಠ ಹೇಳುವಿ ನೀವೇವೇ ॥ ೧೬ ॥

ಈ ರೀತಿ ಸ್ವಪ್ನವು ಆಗಿ ರಘೋತ್ತಮರು
ವಿಪ್ರನಲ್ಲಿ ಪಾಠಕ್ಕೆ ಪೋಗುವುದು ತೊರೆದು
ಆ ಪಂಡಿತವರ್ಯಗಿಂತ ಉತ್ತಮ ರೀತಿ
ತಾಪೇಳಿದರು ಪಾಠ ಮಠದಿ ಶಿಷ್ಯರಿಗೆ ॥ ೧೭ ॥

ಗುರುಗಳಲಿ ಹರಿ ಇಪ್ಪ ಗುರುದ್ವಾರ ಒಲಿವನು
ಗುರು ಅನುಗ್ರಹ ಇದ್ದರೇ ಹರಿ ಅನುಗ್ರಹ
ಗುರು ಪ್ರಸಾದವ ಪಡೆದ ಶ್ರೀ ರಘೋತ್ತಮರಿಗೆ
ಶಾಸ್ತ್ರ ಜ್ಞಾನವು ಪ್ರಜ್ವಲಿಸಿತು ಪೂರ್ಣದಲಿ ॥ ೧೮ ॥

ಜಾತಾಪರೋಕ್ಷಿಗಳು ದೇವತಾಂಶರಿಗೇವೆ
ಜ್ಞಾತವಾಗುವ ಪದ ವಾಕ್ಯವ ತಾತ್ಪರ್ಯ
ಈ ದೇವತಾಂಶ ಶ್ರೀ ರಘೋತ್ತಮ ಗುರುವರರು
ಸಂದೇಹವಿಲ್ಲದೆ ತಿಳಿದು ಭೋಧಿಸಿದರು ॥ ೧೯ ॥

ತನ್ನಲ್ಲಿ ವ್ಯಾಸಂಗ ಪೂರೈಸಿದ ಬಾಲ
ಏನು ಪಾಠವ ಹೇಳಿ ಶಕ್ತನೆಂದರಿಯೆ
ಕಾಣದೆ ಮರೆಯಾಗಿ ನಿಂತು ಆ ವಿಪ್ರ
ಶ್ರವಣ ಮಾಡಿದ ಗುರುಗಳು ಬೋಧಿಸುವುದು ॥ ೨೦ ॥

ಸಂದಿಗ್ಧವಾಗಿ ತನ್ನಗಿದ್ದ ವಿಷಯಗಳನ್ನೂ
ಅದ್ಭುತ ರೀತಿಯಲ್ಲಿ ಅನಾಯಾಸವಾಗಿ
ಅತಿವಿಶದಿ ರಘೂತ್ತಮರು ಪೇಳಲು ಕೇಳಿ
ಬಂದು ಮುಂದೆ ನಿಂತು ನಮಿಸಿದನು ವಿಪ್ರ ॥ ೨೧ ॥

ತಾನು ಮಾಡಿದ ಉದಾಸೀನ ಅಪರಾಧಗಳ
ಘನ ದಯದಿ ಕ್ಷಮಿಸಬೇಕೆಂದು ಬೇಡುತ್ತ
ತನು ದಂಡವತ್ ಭುವಿಯಲ್ಲಿ ಬಿದ್ದು ನಮಿಸಿದನು
ದೀನದಯಾಳು ಗುರು ಅಭಯ ನೀಡಿದರು ॥ ೨೨ ॥॥

ದಿಗ್ವಿಜಯ ಮಾಡುತ್ತ ಅಲ್ಲಲ್ಲಿ ದುರ್ಮತ
ದುರ್ವಾದಿಗಳನ್ನು ಖಂಡಿಸಿ ಸಿದ್ಧಾಂತ
ತತ್ವ ಬೋಧಿಸಿ ಜಗತ್ ಪ್ರಖ್ಯಾತರಾದರು
ಶಾಶ್ವತ ನಿಜಸುಖ ಮಾರ್ಗದರ್ಶಕರು ॥ ೨೩ ॥

ರಘುವರ್ಯ ಗುರುಗಳು ನೇರ ಸ್ವಪ್ನದಲಿ
ರಘೂತ್ತಮರಿಗೆ ಪೇಳಿದ ಪ್ರಕಾರ
ದಿಗ್ವಿಜಯ ಸಮಯದಿ ಸಂಸ್ಥಾನಕೆ ಭೂಷಣ
ಬಗೆ ಬಗೆ ವಸ್ತು ಪರಿವಾರ ಸೇರಿಸಿದರು ॥ ೨೪ ॥

ವೇದಾಂತ ಸಾಮ್ರಾಜ್ಯ ರಾಜಗುರುರಾಜರು
ಹಸ್ತಿಘೋಟಕ ಕೊಂಬು ವಾದ್ಯಮೇಳಗಳು
ಸುತ್ತಲೂ ವಿದ್ವಜ್ಜನ ವೇದಘೋಷದ ಮಧ್ಯ
ಮುತ್ತು ಪಲ್ಲಕ್ಕಿಯೊಳು ಕುಳಿತರು ದೇವರ ಸಹ ॥ ೨೫ ॥

ಪೋದ ಕಡೆಗಳಲಿ ದಿಗ್ವಿಜಯ ರಾಮಾರ್ಚನೆ
ವಿದ್ವಜ್ಜನ ಸಭೆ ವಾಕ್ಯಾರ್ಥ ಪಾಠ
ಸಿದ್ಧಾಂತ ಸ್ಥಾಪನೆ ದುರ್ಮತ ನಿರಾಸವು
ಸಾಧು ಸಜ್ಜನರ ಉದ್ಧಾರ ಪ್ರತಿದಿನವು ॥ ೨೬ ॥

ಬಾದರಾಯಣ ನಿರ್ಣೀತ ರೀತಿಯಲಿ
ಮಧ್ವರಾಯರು ಬರೆದ ಗ್ರಂಥಗಳಿಗೆ
ಅದ್ಭುತ ಟೀಕೆ ಜಯತೀರ್ಥರು ಮಾಡಿದರು
ತದ್ಭಾವ ಬೋಧವು ರಘೂತ್ತಮರ ರಚನೆ ॥ ೨೭ ॥

ಟೀಕಾ ಭಾವಭೋಧರು ಎಂದು ಪ್ರಖ್ಯಾತ
ರಘೂತ್ತಮರ ಎಲ್ಲೆಲ್ಲು ವಿದ್ವಜ್ಜನರು
ನಗರ ಪಟ್ಟಣ ಗ್ರಾಮ ನಾಯಕರು ಪ್ರಮುಖರು
ಸ್ವಾಗತ ಅರ್ಪಿಸಿ ಪೂಜಿಸಿದರು ಮುದದಿ ॥ ೨೮ ॥

ಪುಟ್ಟದಾರಭ್ಯ ಹರಿಪಾದ ಕಮಲದಿ ಮನ
ಇಟ್ಟು ರಘುವರ್ಯರು ಕೊಟ್ಟ ಸಂಸ್ಥಾನ
ಪಟ್ಟ ಆಳಿ ಸರ್ವೋತ್ತಮನನ್ನ ಸೇವಿಸಿ
ಶ್ರೇಷ್ಠತಮ ಸುಖಪ್ರದ ಮಾರ್ಗ ತೋರಿಹರು ॥ ೨೯ ॥

ಹದಿನೈದು ನೂರು ಹದಿನೇಳು ಶಕಮನ್ಮಥ
ಶುದ್ಧ ಏಕಾದಶಿ ಪೌಷ್ಯದಲಿ ಹರಿಯ
ಪಾದ ಸೇರಿದರು ಸಂಸ್ಥಾನ ಆಡಳಿತ
ವೇದವ್ಯಾಸತೀರ್ಥರು ಮಾಡಲಿಕೆ ಬಿಟ್ಟು ॥ ೩೦ ॥

ಮತ್ತೊಂದು ಅಂಶದಲಿ ವೃಂದಾವನದೊಳು
ಹತ್ತಾವತಾರ ಹರಿ ಧ್ಯಾನಪರರಿಹರು ॥
ಭಕ್ತರು ಅಲ್ಲಲ್ಲಿ ಅರ್ಚಿಸಿ ಸೇವಿಸುವ
ಮೃತ್ತಿಕೆಯಲ್ಲೂ ಸಹ ಇದ್ದು ಪಾಲಿಪರು ॥ ೩೧ ॥

ವೃಂದಾವನ ತಿರುಕೋಯಿಲೂರು ಮಣಂಪೊಂಡಿ
ಎಂದು ಕರೆಯಲ್ಪಡುವ ಗ್ರಾಮದಲಿ ಇಹುದು ॥
ಇಂದುಶೇಖರ ಚಾಪದಿಂದ ಉದಿಸಿದ ಪುಣ್ಯ
ನದಿಯು ಹರಿಯುತ್ತೆ ಮಜ್ಜನವು ಅಘಹರವು ॥ ೩೨ ॥

ಮಂದಜಾಸನ ಮೊದಲಾದ ಸುರವೃಂದ
ವಂದಿತ ರಮಾಪತಿಯು ರಘೂತ್ತಮಾಂತಸ್ಥ ॥
ವೃಂದಾವನದಿ ಗುರು ಹರಿಭಕ್ತಿ ಪೂರ್ವಕದಿ
ಬಂದು ಸೇವಿಪರಿಗೆ ವಾಂಛಿತಗಳೀವ ॥ ೩೩ ॥

ಗಾಳಿ ಬಿಸಿಲು ಮಳೆ ಮಂಜುಗಳ ಲೆಕ್ಕಿಸದೆ
ಮಾಲೋಲನ ಧ್ಯಾನಿಸುತ ವೃಂದಾವನದೊಳು ॥
ಕುಳಿತಿಹರು ಪರಮ ಕಾರುಣಿಕ ಈ ಗುರುಗಳು
ಪಾಲಿಸುತಿಹರು ಎಮ್ಮ ಅನುಗಾಲದಯದಿ ॥ ೩೪ ॥

ವೃಂದಾವನ ದರ್ಶನ ತೀರ್ಥ ನಮಸ್ಕಾರ
ಪ್ರದಕ್ಷಿಣೆ ಅರ್ಚನೆ ಹಸ್ತೋದಕ
ವಂದನೆ ಸೇವಾದಿಗಳ ಮಾಳ್ಪ ಸಜ್ಜನರ
ಕುಂದು ಕೊರತೆಗಳಳಿವ ಇಷ್ಟಾರ್ಥಪ್ರದರು ॥ ೩೫ ॥

ಪಿಲ್ಲಿ ಶೂನ್ಯಾದಿ ವಾಮಾಚಾರ ಪೀಡೆಗಳು
ಗಾಳಿ ದುಷ್ಟಗ್ರಹ ಪೈಶಾಚಾದಿಗಳು
ಕಳವಳಿಕೆ ಬುದ್ಧಿಭ್ರಮ ವ್ಯಾಧಿದಾರಿದ್ರ್ಯಾದಿ
ಎಲ್ಲ ದೋಷಗಳನ್ನ ಪರಿಹರಿಸುವರು ॥ ೩೬ ॥

ಸವೈರಾಗ್ಯ ಜ್ಞಾನವು ಭಕುತಿ ಅಪರೋಕ್ಷ್ಯವ
ಸೇವಿಪ ಯೋಗ್ಯರಿಗೆ ಒದಗಿಸಿ ಉದ್ಧರಿಸಿ
ಸರ್ವವಿಧದಲು ಭಾಗ್ಯ ಆಯುಷ್ಯ ಆರೋಗ್ಯ
ಈವರು ಭಕ್ತಿಯಲಿ ಸ್ಮರಿಸಿ ವಂದಿಪರ್ಗೆ ॥ ೩೭ ॥

ಉತ್ತಮ ತರಗತಿ ದೇವತಾಂಶರು ಇವರು
ಮಧ್ವಮತದುಗ್ಧಾಬ್ಧಿ ಪೂರ್ಣ ಚಂದ್ರ
ಹತ್ತು ತಿಂಗಳು ಹೊತ್ತು ಹೆತ್ತ ಉತ್ತಮ ಸಾಧ್ವಿ
ಮಾತೆಯ ಭಾಗ್ಯ ಏನೆಂಬೆ ಇಂಥವರ ॥ ೩೮ ॥

ಸೂರಿಸುರವರ ಶ್ರೀ ರಘೂತ್ತಮರ ಚರಣದಲಿ
ಶರಣಾದೆ ಎನ್ನಯ ಎನ್ನ ಸೇರಿದವರ
ಪರಿಪರಿ ಪೀಡೆಗಳ ಪಾಪಗಳ ಅಳಿದು
ಕಾರುಣ್ಯ ಔದಾರ್ಯದಿ ಪಾಲಿಸುವರು ॥ ೩೯ ॥

ಸರಿದ್ವರ ಪಿನಾಕಿನಿಯಲ್ಲಿ ಕೇಶವ ಜಗವ
ಈರಡಿಯಲಿ ಅಳೆದ ತ್ರಿವಿಕ್ರಮನು ಶಿರಿಯು
ಇರುತಿಹರು ಹನುಮ ಶಿವಷ್ಕಂದ ತೀರಗಳಲಿ
ಶರಣೆಂಬೆ ಇವರೆಲ್ಲರಿಗೆ ಶ್ರೀ ರಘೋತ್ತಮರಿಗೂ ॥ ೪೦ ॥

ಕಮಲಭವಪಿತ ಶ್ರೀ ಪ್ರಸನ್ನ ಶ್ರೀನಿವಾಸ
ಕಮಲಾಯುತ ವಿಶ್ವರೂಪ ತ್ರಿವಿಕ್ರಮನಿಗೆ
ಭೀಮ ಶಿವಸ್ಕಂಧರಿಗೆ ಪ್ರಿಯತಮ ರಘೂತ್ತಮರಿಗೆ
ಈ ಮಂಗಳ ಚರಿತ ಶ್ರೀ ಕೃಷ್ಣಾರ್ಪಿತವು ॥ ೪೧ ॥

॥ಇತಿ ಶ್ರೀ ಪ್ರಸನ್ನ ಶ್ರೀನಿವಾಸಾರ್ಯ ವಿರಚಿತ
ಶ್ರೀ ರಘೂತ್ತಮತೀರ್ಥರ ಚರಿತ್ರಂ ಸಂಪೂರ್ಣಂ ॥